

# ಹೊಸ ‘ಬ್ರಿಡ್ಜ್’, ಹಳೆ ‘ಮಮ್ಮಿ’

**ತಮ್ಮ ಮೊದಲ ಸಿನಿಮಾ ‘ಮಮ್ಮಿ’ಯ ಮೂಲಕ ಪ್ರೇಕ್ಷಕರನ್ನು ಬೆಚ್ಚಿಬೀಳಿಸಿದ್ದ ನಿರ್ದೇಶಕ ಲೋಹಿತ್ ಎಚ್. ಅವರೀಗ ‘ಹೌರಾ ಬ್ರಿಡ್ಜ್’ ಕಟ್ಟುವುದರಲ್ಲಿ ಬ್ಯುಸಿಯಾಗಿದ್ದಾರೆ. ಹಾರರ್ ಜಾನರ್‌ನಿಂದ ಥ್ರಿಲ್ಲರ್‌ಗೆ ಹೊರಳಿಕೊಂಡಿರುವ ಲೋಹಿತ್ ಅವರಿಗೆ ಬೇರೆ ಬೇರೆ ಪ್ರಕಾರದ ಸಿನಿಮಾ ಮಾಡುವ ಇಂಗಿತ ಇದೆ.**

■ ಪದ್ಮನಾಭ ಭಟ್

◆ ‘ಹೌರಾ ಬ್ರಿಡ್ಜ್’ ಸಿನಿಮಾ ಯಾವ ಹಂತದಲ್ಲಿದೆ?

ಈಗ ಸೌಂಡ್ ಎಫೆಕ್ಟ್ ಕೆಲಸ ಕೋಲ್ಕತ್ತದಲ್ಲಿ ನಡೆಯುತ್ತಿದೆ. ಕೋಲ್ಕತ್ತದಲ್ಲಿಯೇ ಸೌಂಡ್ ಎಫೆಕ್ಟ್ಸ್ ಅಳವಡಿಸಬೇಕು ಎಂದು ನಿರ್ಧರಿಸಲೂ ಕಾರಣವಿದೆ. ಇಲ್ಲಿನ ಪರಿಸರವೇ ಬೇರೆ, ಕೋಲ್ಕತ್ತದ ಪರಿಸರವೇ ಬೇರೆ. ಇಡೀ ಸಿನಿಮಾ ಕೋಲ್ಕತ್ತದಲ್ಲಿಯೇ ಚಿತ್ರೀಕರಿಸಲಾಗಿದೆ. ಹೌರಾ ಬ್ರಿಡ್ಜ್ ಮೇಲೆ ಈ ಚಿತ್ರದ ಪ್ರಮುಖ ದೃಶ್ಯ ನಡೆಯುತ್ತದೆ. ಈ ಬ್ರಿಡ್ಜ್, ಹೌರಾ ಮತ್ತು ಕೋಲ್ಕತ್ತ ಎರಡು ನಗರಗಳನ್ನು ಸಂಪರ್ಕಿಸುತ್ತದೆ. ಸೇತುವೆಯ ಕೆಳಗೆ ಗಂಗಾನದಿ ಹರಿಯುತ್ತದೆ. ಸೇತುವೆಯ ಒಂದು ಭಾಗದಲ್ಲಿ ರೈಲ್ವೇ ಸ್ಟೇಷನ್ ಇದೆ, ಇನ್ನೊಂದು ಭಾಗದಲ್ಲಿ ಮಾರುಕಟ್ಟೆ ಇದೆ. ನಾನು ಕ್ಯಾಮೆರಾ ಎಡದಿಂದ ಬಲಕ್ಕೆ ತಿರುಗಿದರೆ ಆ ಸೌಂಡ್ ಕೂಡ ಹಾಗೆಯೇ ಬದಲಾಗಬೇಕು. ಈ ಸೂಕ್ಷ್ಮಗಳು ಇಲ್ಲಿ ಮಾಡುವುದು ಕಷ್ಟ. ಅಲ್ಲದೆ ಅಲ್ಲಿನ ಬೆಂಗಾಲಿ ಹಾಡುಗಳು, ಸೌಂಡು ಎಲ್ಲವೂ ಅಲ್ಲಿಯೇ ಸಿಗುವುದು.

◆ ಚಿತ್ರೀಕರಣದ ಹಂತದಲ್ಲೇನಾದರೂ ತಾಂತ್ರಿಕವಾಗಿ ಪ್ರಯೋಗ ಮಾಡಿದ್ದೀರಾ?

ಇಡೀ ಸಿನಿಮಾದಲ್ಲಿ ಸಿನಿಮ್ಯಾಟಿಕ್ ಫೀಲ್ ಇರುವುದಿಲ್ಲ. ಲೈವ್ ಫೀಲ್‌ನಲ್ಲಿಯೇ ಚಿತ್ರೀಕರಣ ಮಾಡಲಾಗಿದೆ.

◆ ‘ಮಮ್ಮಿ’ ಸಿನಿಮಾದಲ್ಲಿ ನಟಿಸಿದ್ದ ಪ್ರಿಯಾಂಕಾ ಉಪೇಂದ್ರ ಅವರನ್ನೇ ಈ ಚಿತ್ರಕ್ಕೂ ಆಯ್ಕೆ ಮಾಡಿಕೊಂಡಿರುವುದಕ್ಕೆ ನಿರ್ದಿಷ್ಟ ಕಾರಣ ಏನಾದರೂ ಇದೆಯಾ?

ಈ ಸಿನಿಮಾದ ಕಥೆ ಬರೆಯುವಾಗಲೇ ಅವರು ನನ್ನ ತಲೆಯಲ್ಲಿದ್ದರು. ಏಳು ತಿಂಗಳ ಬಸುರಿ ಈ ಚಿತ್ರದ ನಾಯಕಿ. ಆ ಪಾತ್ರಕ್ಕೆ ಅವರೇ ಹೊಂದುತ್ತಾರೆ ಅನಿಸಿತು. ಹಾಗೆಯೇ ವರ್ಕ್ ಕಂಫರ್ಟ್ ಕೂಡ ಒಂದು ಕಾರಣ. ಅವರು ಸೆಟ್‌ನಲ್ಲಿ ಏನನ್ನೂ ಪ್ರಶ್ನಿಸುವುದಿಲ್ಲ. ಸ್ಟಾರ್ ಹೀರೋಯಿನ್ ಎಂಬ ಹಮ್ಮು ತೋರಿಸುವುದಿಲ್ಲ. ನಮಗೆ ಮೆಕಪ್ ಇಲ್ಲದೇ ಕಾಣಿಸಿಕೊಳ್ಳಬೇಕಿತ್ತು. ಅದಕ್ಕೆ ಎಲ್ಲರೂ ಒಪ್ಪಿಕೊಳ್ಳುವುದಿಲ್ಲ. ಇವರು ಒಪ್ಪಿಕೊಂಡರು. ಈ ಚಿತ್ರದ ನೋಡಿದ ಮೇಲೆ ಪ್ರಿಯಾಂಕಾ ಅವರನ್ನು ಬಿಟ್ಟರೆ ಬೇರೆ ಯಾರೂ ಮಾಡಲಿಕ್ಕೆ ಆಗ್ತಿರಲಿಲ್ಲ ಎಂದು ನೋಡಿದವರಿಗೇ ಅನಿಸುತ್ತದೆ.

◆ ಪ್ರಿಯಾಂಕಾ ಮತ್ತು ಉಪೇಂದ್ರ ಅವರ ಮಗಳನ್ನೂ ಈ ಚಿತ್ರದ ಮೂಲಕ ಪರಿಚಯಿಸುತ್ತಿದ್ದೀರಾ...

ಹೌದು. ಐಶ್ವರ್ಯಾ ಅವರು ತುಂಬ ವಿಶೇಷ ಪಾತ್ರದಲ್ಲಿ ಕಾಣಿಸಿದ್ದಾಳೆ. ಆ ಪಾತ್ರದ ಬಗ್ಗೆ ಹೆಚ್ಚೇನೂ ಹೇಳಲಾರೆ.

◆ ‘ಮಮ್ಮಿ’ ಮೂಲಕ ಪ್ರೇಕ್ಷಕರನ್ನು ಬೆಚ್ಚಿಬೀಳಿಸಿದಿರಿ. ಈಗ ಥ್ರಿಲ್ಲರ್ ಕಥೆ ಮಾಡಲು ಹೊರಟಿದ್ದೀರಿ. ಇವುಗಳನ್ನು ಬಿಟ್ಟು ಬೇರೆ ಪ್ರಕಾರದ ಸಿನಿಮಾ ಮಾಡುವ ಆಲೋಚನೆ ಇಲ್ಲವೇ?

ಎಲ್ಲ ಪ್ರಕಾರದ ಸಿನಿಮಾಗಳನ್ನೂ ಮಾಡಬೇಕು ಎನ್ನುವುದು ನನ್ನ ಆಸೆ. ಒಂದು ಗ್ಯಾಂಗಸ್ಟರ್ ಸಿನಿಮಾ ಮಾಡಬೇಕು ಎಂದು ಸಿದ್ಧಗೊಂಡಿದ್ದೆ. ನನ್ನ ಮೊದಲ ಸ್ಕ್ರಿಪ್ಟ್ ಕೂಡ ಅಂಥದ್ದೇ ಕಥೆ. ಆದರೆ ಸಿನಿಮಾ ಮಾಡಲು ಕಾಲ ಕೂಡಿಬರಲಿಲ್ಲ. ‘ಮಮ್ಮಿ’ ಆದ ಮೇಲೆ ಆ ಸಿನಿಮಾ ಮಾಡಬೇಕು ಅಂದುಕೊಂಡಿದ್ದೆ. ಅದು ಇನ್ನಷ್ಟು ಮುಂದಕ್ಕೆ ಹೋಯ್ತು. ಮುಂದೆ ಖಂಡಿತ ಬೇರೆ ಥರ ಸಿನಿಮಾ ಮಾಡ್ತೀನಿ.

ಹೌರಾ ಬ್ರಿಡ್ಜ್ ಬರೀ ಥ್ರಿಲ್ಲರ್ ಸಿನಿಮಾ ಅಲ್ಲ. ಕಾಡುವ ಭಾವನೆಗಳು, ಸಮಾಜಕ್ಕೆ ಏನೋ ವಿಷಯ ಹೇಳುವ ಪ್ರಯತ್ನ ಎಲ್ಲವೂ ಈ ಸಿನಿಮಾದಲ್ಲಿದೆ. ■